ಅದಾದ ಮರುಕ್ಷಣವೇ ಅವನು ಮತ್ತೆ ಸಾಗತೊಡಗಿದಂತೆ, ಆ ನಾಯಿ ಯಾವ ಅವಸರವೂ ಇಲ್ಲದ ಹೆಜ್ಜೆಗಳನಿಟ್ಟುಕೊಂಡು ಅವನನ್ನು ಮತ್ತೆ ಹಿಂಬಾಲಿಸತೊಡಗಿತು. ಅವನ ಮನಸೆಲ್ಲಾ ದೂರದ ರೈಲ್ವೇ ಸ್ಟೇಷನ್, ಅಲ್ಲಿನ ಹೊಳೆಯುವ ಹಳಿಗಳು, ದಕ್ಷಿಣದ ಕಡೆಯಿಂದ ಬರುತ್ತಿದ್ದ ರೈಲಿನ ಎಂಜಿನ್ ಉಗುಳುತ್ತಿದ್ದ ಹೊಗೆಯಲ್ಲಿ ಮುಳುಗಿ ಹೋಗಿತ್ತು.

ನಿರ್ಜನ ಹುಲ್ಲುಮಾಳಗಳ ಇಳುಕಲಲ್ಲಿ ಅವನ ಕುದುರೆ ನಡೆಯುತ್ತಿತ್ತು. ಆ ಹುಲ್ಲುಮಾಳಗಳು ಕೆಲವು ಕಡೆ ಕಲ್ಲುಗಳಿಂದ ಕೂಡಿದ್ದು, ಬಿಸಿಲ ಧಗೆಯಲ್ಲಿ ಸುಡುತ್ತಿದ್ದವು. ತಿಳಿಯಾದ ಆಕಾಶದ ಕೆಳಗೆ ಶರತ್ಕಾಲದ ಹಗಲಿನ ಸೊಬಗಿತ್ತು. ನಿರ್ಜನ ಬಯಲುಗಳು, ಕೊರಕಲುಗಳು, ರಷ್ಯಾದ ಬಲು ದೊಡ್ಡ ಹುಲ್ಲುಗಾವಲುಗಳು... ಎಲ್ಲವೂ ಇಡಿಯಾಗಿ ಮಹಾನ್ ಮೌನವೊಂದರಿಂದ ಬಂಧಿಸಲ್ಪಟ್ಟಿದ್ದವು. ಬ್ರಹ್ಮದಂಡಿ ಗಿಡದಿಂದ ಹತ್ತಿಯ ಎಳೆಗಳು ಹಾಗೂ ಬರ್ಡಾಕ್ ಅಂಟು ಮುಳ್ಳುಗಳು ಮೆಲ್ಲಗೆ ಗಾಳಿಯಲ್ಲಿ ತೇಲುತ್ತಿದ್ದವು. ಬೆಟ್ಟದ ಹಾಡು ಹಕ್ಕಿಗಳು ಬರ್ಡಾಕ್ ಮುಳ್ಳುಗಳ ಮೇಲೆ ಕೂತಿದ್ದವು. ಅವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಮತ್ತೊಂದು ಜಾಗಕ್ಕೆ ಹಾರುತ್ತಾ, ಇನ್ನುಳಿದಂತೆ ದಿನವಿಡೀ ಹಾಗೇ ಅಲ್ಲೇ ಕೂತಿರುತ್ತವೆ, ಸೊಬಗಿನಲ್ಲಿ ಮತ್ತು ಖುಷಿಯಲ್ಲಿ ಗದ್ದಲವಿರದ ತಮ್ಮ ಬದುಕನ್ನು ಮುಂದುವರೆಸಲೆಂದು.

### ಇವಾನ್ ಬುನಿನ್ (1870–1953)

ರಷ್ಯಾದ ಶ್ರೇಷ್ಠ ಲೇಖಕ. ಟರ್ಜನೇವ್ ಮತ್ತು ಚೆಕಾಫ್‌ರ ಮಹಾನ್ ಸಂಪ್ರದಾಯವನ್ನು ಸಮರ್ಥವಾಗಿ ಮುಂದುವರೆಸಿ ಅವರಷ್ಟೇ ಮನ್ನಣೆ ಪಡೆದುಕೊಂಡವನು. ಬೋರಿಸ್ ಪಾಸ್ತರ್ನಾಕ್‌ಗೆ 1958ರಲ್ಲಿ ನೊಬೆಲ್ ಬಹುಮಾನ ಬರುವುದಕ್ಕೆ ಮುಂಚೆ, ಅಂದರೆ ಸುಮಾರು ಇಪ್ಪತ್ತೈದು ವರ್ಷಗಳಿಗೂ ಮೊದಲು, 1933ರಲ್ಲಿ ತನ್ನ ತಾಯ್ನಾಡಿಗೆ ಮೊದಲ ನೊಬೆಲ್ ಬಹುಮಾನ ತಂದುಕೊಟ್ಟವನು. ತಮ್ಮ ಕಾವ್ಯಾತ್ಮಕ ಭಾಷೆಯ ಮೂಲಕ ರಷ್ಯಾದ ಬದುಕನ್ನು ಬುನಿನ್ ಬರಹಗಳು ಕಟ್ಟಿಕೊಟ್ಟಿವೆ. ಅವು ತಮ್ಮ ಆಧುನಿಕ ಪ್ರಜ್ಞೆಯಿಂದಾಗಿ ಇಂದಿಗೂ ತಾಜಾತನವನ್ನು ಉಳಿಸಿಕೊಂಡಿವೆ. ಕವಿಯಾಗಿ ಬರೆಯುವ ಬದುಕಿಗೆ ಬಿದ್ದ ಬುನಿನ್ ಹೆಸರು ಮಾಡಿದ್ದು ಕಥೆಗಾರನಾಗಿ. ಇವನ ಅತ್ಯಂತ ಇಷ್ಟದ ಕಥಾವಸ್ತುಗಳೆಂದರೆ ಪ್ರೀತಿ ಮತ್ತು ಸಾವು. 1953ರಲ್ಲಿ ಬುನಿನ್ ಪ್ಯಾರಿಸ್‌ನಲ್ಲಿ ಸಾಯುವುದರೊಂದಿಗೆ ರಷ್ಯಾದ ಅಕ್ಷರ ಲೋಕದ ಮಹಾನ್ ಯುಗವೊಂದು ಕೊನೆಯಾಯಿತು. 'ದ ವಿಲೇಜ್', 'ದ ಜಂಟಲ್‌ಮನ್ ಫ್ರಂ ಸ್ಯಾನ್‌ಫ್ರ್ಯಾನ್ಸಿಸ್ಕೊ', 'ಮಿತ್ಯಾಸ್ ಲವ್', 'ಕರ್ಸಕ್ ಡೇಸ್', 'ಲೈಫ್ ಆಫ್ ಅರ್ಸೇನೀಫ್', 'ಡಾರ್ಕ್ ಅವೆನ್ಯೂಸ್' ಮುಂತಾದವು ಬುನಿನ್‌ನ ಮುಖ್ಯ ಕೃತಿಗಳು.

### ಎಸ್. ಗಂಗಾಧರಯ್ಯ

ಕತೆಗಾರ ಮತ್ತು ಅನುವಾದಕ ಗಂಗಾಧರಯ್ಯ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮಾಕುವಳ್ಳಿಯವರು. 'ನವಿಲ ನೆಲ', 'ಒಂದು ಉದ್ದನೆಯ ನೆರಳು', 'ದೇವರ ಕುದುರೆ', 'ಮಣ್ಣಿನ ಮುಚ್ಚಳ' ಅವರ ಪ್ರಕಟಿತ ಕಥಾಸಂಗ್ರಹಗಳು. 'ವೈಕಂ ಕಥೆಗಳು', ಲೋರ್ಕಾನ 'ಎರ್ಮಾ', ಟರ್ಜನೇವ್‌ನ 'ಬೇಟೆಗಾರನ ಚಿತ್ರಗಳು', ಚಿಂಗೀಝ್ ಐತ್ಮತೋವ್‌ನ 'ಜಮೀಲಾ', ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್‌ನ ಸಂದರ್ಶನ 'ಸೀಬೆ ಸೊಗಡು' ಅವರ ಅನುವಾದಿತ ಕೃತಿಗಳಾಗಿವೆ. ಪ್ರಸ್ತುತ ತಿಪಟೂರಿನಲ್ಲಿ ವಾಸ.